
# ಕಲೆ ಮತ್ತು ಆತ್ಮೋನ್ನತಿ



ನನ್ನ ಪ್ರಕಾರ ಏಸು ಕ್ರಿಸ್ತನು ಒಬ್ಬ ಅಪೂರ್ವ ಕಲಾವಿದ. ಯಾಕೆಂದರೆ ಆತ ಸತ್ಯವನ್ನೇ ಕಂಡುಕೊಂಡ ಮತ್ತು ಅದನ್ನೇ ಎಲ್ಲರಿಗೂ ಸಾರಿದ. ಆದರೆ ಕಲಾವಿದರೆಂದು ತಮ್ಮನ್ನು ಕರೆದುಕೊಳ್ಳುವ ಬಹಳಷ್ಟು ಮಂದಿಯ ಕಲಾಕೃತಿಗಳಲ್ಲಿ ಆತ್ಮೋನ್ನತಿಯ ಸೆಳೆತವಾಗಲೀ ಚಡಪಡಿಕೆಯಾಗಲೀ ಕಾಣುವುದೇ ಇಲ್ಲ. ನಿಜವಾದ ಕಲೆಯೆಂದರೆ ಆತ್ಮದ ಅನಾವರಣವೇ...

ವೈಯಕ್ತಿಕವಾಗಿ ಹೇಳುವುದಾದರೆ, ನಾನು ಹೊರಜಗತ್ತಿನ ಗೊಡವೆ ಬಿಟ್ಟು ಒಳಗಿನ ಅನುಭೂತಿಯ ನೆರವಿನಿಂದ ನಿರಾಳವಾಗಿ ಜೀವಿಸಬಲ್ಲೆ. ಹೀಗೆ ನಾನು ಕಲೆಯ ಸಾನಿಧ್ಯದಲ್ಲಿ ಬದುಕುತ್ತಿರುತ್ತೇನೆ ಎಂದು ತಿಳಿಯುವೆ. ನಾನು ಕಲಾಕೃತಿಗಳನ್ನು ರಚಿಸದಿರಬಹುದು. ಆದರೆ ನನ್ನ ಮನೆಯ ಕೋಣೆಗಳಿಗೆ ಚಿತ್ತಾರವಿಲ್ಲದಿದ್ದರೂ, ಮನೆಗೆ ಚಾವಣಿಯೇ ಇಲ್ಲದಿದ್ದರೂ ಜೀವಿಸಲು ನನಗೇನೂ ಕಷ್ಟವೆನಿಸಲಿಕ್ಕಿಲ್ಲ. ಯಾಕೆಂದರೆ ನಾನು ರಾತ್ರಿಯ ಹೊತ್ತಿನ ಚುಕ್ಕಿಗಳ ಆಕಾಶವನ್ನು ನೋಡುತ್ತ ಹೊತ್ತು ಕಳೆಯಬಲ್ಲೆ...

ಗೋಚರವಾಗುವ ಸೌಂದರ್ಯಕ್ಕಿಂತ ಅಗೋಚರ ಸೌಂದರ್ಯವನ್ನು ಕಲೆ ತಟ್ಟನೆ ಗುರುತಿಸಬಲ್ಲದು. ಕಲೆಯಲ್ಲಿ ವಿನಾಶಕಾರಿ ಕಲೆ ಹಾಗೂ ಜೀವವನ್ನು ಪೊರೆಯುವ ಕಲೆ ಎಂಬುದಾಗಿ ಎರಡು ವಿಧ. ನಿಜವಾದ ಕಲೆ ಎನ್ನುವುದು ಕಲಾವಿದರ ಭಾವನೆಗಳ ಪ್ರಾಮಾಣಿಕ ದಾಖಲೆ ಅನಿಸುವಂತಿರುತ್ತದೆ... ಸಾಕ್ರಟಿಸ್ ತನ್ನ ಕಾಲದಲ್ಲಿ ಸತ್ಯನಿಷ್ಠೆಗೆ ಹೆಸರಾದ ವ್ಯಕ್ತಿ ಎಂದು ಕೇಳಿ ಬಲ್ಲೆವು. ಆತ ರೂಪಿನಲ್ಲಿ ಇಡೀ ಗ್ರೀಸ್ ದೇಶದಲ್ಲೇ ಕಳಪೆಯಾಗಿದ್ದ. ಆದರೆ ನನ್ನ ಪ್ರಕಾರ ಸಾಕ್ರಟಿಸ್ ಬಹಳ ಸುಂದರ ಮನುಷ್ಯ. ಅವನ ಸೌಂದರ್ಯವಿದ್ದುದು ಅವನ ಅಂತರಂಗದಲ್ಲಿ; ಆತನ ಸತ್ಯಾನ್ವೇಷಣೆಯಲ್ಲಿ. ಸತ್ಯಾನ್ವೇಷಣೆ ಎಲ್ಲರ ಬದುಕಿನ ಮೂಲ ಧ್ಯೇಯವಾಗಬೇಕು. ಸೌಂದರ್ಯ ಹಾಗೂ ಸತ್ವ ಆಮೇಲೆ ತಾವಾಗಿಯೇ ವ್ಯಕ್ತಿತ್ವಕ್ಕೆ ಕೂಡಿಕೊಳ್ಳುತ್ತವೆ...'